


ಅರಿಶಿನ ಬುರುಡೆ ವಲಸೆ ಹಕ್ಕಿ


ಚುಕ್ಕೆ ರಾಟವಾಳ ಹಕ್ಕಿಗಳ ಚಿನ್ನಾಟ



ಬರುವ ಅತಿಥಿಗಳೇ ಎಂಬುದು ವಿಶೇಷ ಸಂಗತಿ ಎನಿಸಿತು.

ಮಂಜುನಾಥ ಅವರದ್ದು ಪರಿಸರಸ್ನೇಹಿ ಮನೆ. ಮನೆಯನ್ನು ಸಂಪೂರ್ಣವಾಗಿ ಮುರಕಲ್ಲಿನಿಂದ (ಕೆಂಪು ಕಲ್ಲು) ಕಟ್ಟಲಾಗಿದೆ. ಮನೆಗೆ ಹೆಂಚನ್ನು ಹೊದಿಸಲಾಗಿದೆ. ಮನೆಯ ಸುತ್ತಲೂ ಗಿಡಮರ, ಪೊದೆ, ಹುಲ್ಲಿನ ಹಸಿರು ಕಣ್ತುಂಬುವಂತಿದೆ. ಹೀಗಾಗಿ ಮನೆಯೊಳಗೆ ಸದಾ ತಂಪಿನ ಅನುಭವ. ಮನೆಯ ಹೊರಾವರಣವೂ ಅಷ್ಟೆ. ಹಸಿರು ಮೇಳೈಸುವಂತಿದ್ದು, ಈ ಕಾರಣಕ್ಕೇ ಹಲವು ಹಕ್ಕಿಗಳು ಇಲ್ಲಿಗೆ ಬಂದು ಹೋಗುತ್ತವೆ.

ಮಂಜುನಾಥ ಅವರಿಗೂ ಪಕ್ಷಿಗಳೆಂದರೆ ಬಲು ಪ್ರೀತಿ. ಪಕ್ಷಿಗಳ ವೀಕ್ಷಣೆ, ಅವುಗಳ ಚೆಲ್ಲಾಟ, ಜಲಕ್ರೀಡೆ, ಆಹಾರ ಹಿಡಿಯುವ ಕೌಶಲ, ತಿನ್ನುವ ಪರಿ ಇವೆಲ್ಲವನ್ನೂ ಗಮನಿಸುತ್ತಾ ಅವುಗಳನ್ನು ಕ್ಯಾಮೆರಾದಲ್ಲಿ ಸೆರೆಹಿಡಿಯುವುದು ಅವರ ಹವ್ಯಾಸ. ಮನೆಯ ಹೊರಜಗುಲಿ, ಕೋಣೆಯ ಕಿಟಕಿಗಳಿಂದ ಹಲವು ಹಕ್ಕಿಗಳ ಥರಾವರಿ ಚಿತ್ರಗಳನ್ನೂ ಕ್ಲಿಕ್ಕಿಸಿದ್ದಾರೆ.

‘ಮನೆಯ ಅಂಗಳಕ್ಕೆ ಸುಮಾರು ತೊಂಬತ್ತಕ್ಕಿಂತಲೂ ಹೆಚ್ಚಿನ ಜಾತಿಯ ಹಕ್ಕಿಗಳು ಭೇಟಿ ನೀಡುತ್ತವೆ. ಅವುಗಳಲ್ಲಿ ಹನ್ನೆರಡಕ್ಕಿಂತಲೂ ಹೆಚ್ಚಿನವು ವಲಸೆ ಹಕ್ಕಿಗಳು. ನವೆಂಬರ್‌ನಿಂದ ಮಾರ್ಚ್ ತಿಂಗಳವರೆಗೆ ಬರುತ್ತವೆ’ ಎಂದು ಹಕ್ಕಿಗಳ ಕುರಿತು ವಿವರಣೆ ನೀಡುತ್ತಾರೆ ಮಂಜುನಾಥ.

ಸುಮಾರು ಮೂವತ್ತು ಎಕರೆ ವಿಸ್ತೀರ್ಣದಲ್ಲಿ ಹರಡಿಕೊಂಡಿರುವ ಈ ಗೇಟೆಡ್ ಕಮ್ಯುನಿಟಿಯ ಭೂಮಿ ಮೂರು ದಶಕಗಳ ಹಿಂದೆ ಹೇಳಿಕೊಳ್ಳುವಂತಹ ಯಾವ ಸಸ್ಯ ಸಂಪತ್ತನ್ನು ಸಹ ಹೊಂದಿರಲಿಲ್ಲ.


ನೀಲಕಟಿಕಿ ಹಕ್ಕಿ

ಕ್ರಮೇಣ ನಿವಾಸಿಗಳು ತಳವೂರಿದಂತೆ ಅಲ್ಲಿ ಬೆಳೆದ ಮರಗಿಡ, ಬಳ್ಳಿಗಳನ್ನು ಸವರದೆ ಹಾಗೆಯೇ ಬಿಟ್ಟು, ಜೊತೆಗೆ ಮುತುವರ್ಜಿ ವಹಿಸಿ ಅವರೆಲ್ಲ ನೆಟ್ಟ ವಿವಿಧ ಜಾತಿಯ ಮರಗಿಡಗಳಿಂದಾಗಿ ಇಂದು ಸಸ್ಯಸಂಪತ್ತಿನ ಗಣತಿ ಮೂವತ್ತು ಸಾವಿರವನ್ನು ದಾಟಿದೆ. ಇವುಗಳಲ್ಲಿ ಹಣ್ಣು ಬಿಡುವ ಗಿಡಮರ ಬಳ್ಳಿಗಳು, ಹೂವಿನ ಗಿಡಗಳು ಹೇರಳವಾಗಿವೆ. ಸಂಚಾರಕ್ಕೆ ಅಡ್ಡಿಯಾಗುವ ಮರಗಿಡಗಳ ರೆಂಬೆಕೊಂಬೆಗಳನ್ನಷ್ಟೇ ಸವರಿ, ಬುಡದಲ್ಲಿ ಬಿದ್ದ ತರಗಲೆ, ಬೆಳೆಯುವ ಹುಲ್ಲನ್ನು ಅಲ್ಲಿಯೇ ಕೊಳೆತು ಗೊಬ್ಬರವಾಗಲು ಬಿಟ್ಟು ಪ್ರಕೃತಿಯ ಸಹಜ ಚೆಲುವಿಗೆ ಒತ್ತುನೀಡಿದ್ದಾರೆ. ಇದು ಹಕ್ಕಿಗಳನ್ನು ಸೆಳೆಯಲು ಒಂದು ಅಂಶವಾಗಿದೆ.

ಇದು ಸಂಪೂರ್ಣ ರಾಸಾಯನಿಕಮುಕ್ತ ಪ್ರದೇಶ. ಹೀಗಿರುವುದರಿಂದ ಮಣ್ಣಿನಲ್ಲಿರುವ ಹುಳಹುಪ್ಪಟೆ, ಹಾರಾಡುವ ಚಿಟ್ಟೆ, ಕ್ರಿಮಿಕೀಟಗಳು, ಆಲದ ಹಣ್ಣು, ಮಲ್ಬೆರಿ, ಚಿಕ್ಕು, ಪೇರಳೆ, ಅಮೃತಬಳ್ಳಿಯ ಹಣ್ಣುಗಳು, ಜೇನು, ಜೇನುಹುಟ್ಟು, ಜೇನುನೊಣ, ಹೂವಿನ ಮಕರಂದ... ಪಕ್ಷಿಗಳಿಗೆ ವರ್ಷವಿಡೀ ಆಹಾರವಾಗಿ ದೊರಕುತ್ತವೆ. ಅಚ್ಚ ಹಸಿರು, ನಗರದ ಸದ್ದುಗದ್ದಲವಿಲ್ಲದ ನಿಶ್ಶಬ್ದ ವಾತಾವರಣ, ಯಥೇಚ್ಛವಾಗಿ ಸಿಗುವ ಪ್ರಾಕೃತಿಕ ಆಹಾರ, ಮನೆಯಂಗಳದಲ್ಲಿ ಅಲ್ಲಲ್ಲಿ ಇರಿಸಿದ ನೀರು ತುಂಬಿದ ಮಣ್ಣಿನ ಬಟ್ಟಲು, ತೆಂಗಿನ ಗೆರಟೆಗಳಿಂದಾಗಿ ಪಕ್ಷಿಗಳು ಅಲ್ಲಿಯ ಪರಿಸರವನ್ನು ತಮ್ಮ ಆಹಾರ ವಿಹಾರ ತಾಣವನ್ನಾಗಿಸಿದುದರಲ್ಲಿ ಯಾವ ಅಚ್ಚರಿಯೂ ಇಲ್ಲ. ಕಣ್ಣು ಹಾಯಿಸುವಷ್ಟು ದೂರ ಹಬ್ಬಿದ ಹಸಿರ ಮಧ್ಯೆ ಇಲ್ಲಿ ವರ್ಷವಿಡೀ ನಾನಾ ವಿಧದ ಹಕ್ಕಿಗಳ ಆಗಮನ ಮತ್ತು ಕಲರವ ತುಂಬಿರುತ್ತದೆ.

ನವರಂಗಿ, ಅರಿಶಿನ ಬುರುಡೆ, ನೀಲಕಟಿಕಿ, ಬಾಲದಂಡೆ ಹಕ್ಕಿ, ನೀಲಿತಲೆಯ ಬಂಡೆಸಿಳ್ಳಾರ, ಚುಕ್ಕೆ ರಾಟವಾಳ, ಚಂದ್ರಮುಕುಟ, ಜೆರ್ಡಾನ್‌ನ ಎಲೆಹಕ್ಕಿ, ಮಟಪಕ್ಷಿ, ಡೇಗೆ ಹಕ್ಕಿ, ಕಪ್ಪು ಹಿಂಗತ್ತಿನ ನೀಲಿ ರಾಜಪಕ್ಷಿ, ನೀಲಿಗಡ್ಡದ ಜೇನುಹಿಡುಕ... ಹೀಗೆ ರಂಗುರಂಗಿನ ಹಕ್ಕಿಗಳ ಸಾಲೇ ಅವರ ಆಲ್ಬಂನಲ್ಲಿ ಕಾಣಸಿಗುತ್ತವೆ. ಹಾರಲು ಬಾರದ ಕೋಗಿಲೆಯ ಮರಿ ತನ್ನದೆಂದು ಜೋಪಾನ ಮಾಡುವ ಕಾಗೆ, ಸಮಯಕ್ಕೆ ಸರಿಯಾಗಿ ಸಂಜೆ ಹಾರಿ ಬಂದು ಟೊಂಗೆಗಳ ಮೇಲೆ ಕೂತು ರಾತ್ರಿ ಕಳೆಯುವ ಹಕ್ಕಿಗಳ ದಿನಚರಿ ಇತ್ಯಾದಿ ಚಿತ್ರಗಳು ಅವರ ಸೋಜಿಗದ ಪುಟಗಳಲ್ಲಿ ದಾಖಲಾಗಿವೆ.

ಮಂಜುನಾಥರ ಮನೆಯಂಗಳ ಈಗ ಹಕ್ಕಿಗಳಿಗೆ ನಿರ್ಭೀತ ತಾಣ. ಹಕ್ಕಿಗಳ ವೀಕ್ಷಣೆಯಲ್ಲಿ ದಕ್ಕಿದ ತಮ್ಮ ಶ್ರೀಮಂತ ಅನುಭವಗಳನ್ನು ಪುಸ್ತಕರೂಪದಲ್ಲಿ ಹೊರತರುವ ಇರಾದೆ ಅವರದ್ದು.


ಕಪ್ಪು ಹಿಂಗತ್ತಿನ ನೀಲಿ ರಾಜಹಕ್ಕಿ


ನೀಲಿಗಡ್ಡದ ಜೇನುಹಿಡುಕ


ಚಂದ್ರಮುಕುಟ ಹಕ್ಕಿ